# ಸುದ್ದಿ ಸಂಚಯ

## ವಿವೇಕಶಿಕ್ಷಣದ ಪ್ರಥಮ ವಾರ್ಷಿಕೋತ್ಸವ

''ಸರ್ಕಾರ ಮತ್ತು ಸಮಾಜದ ಮುಂದೆ ಇರುವ ಶಿಕ್ಷಣದ ಸವಾಲನ್ನು ಎದುರಿಸುತ್ತಿರುವ ವಿವೇಕಶಿಕ್ಷಣ ಕಾರ್ಯಕ್ರಮವು ಪ್ರಶಂಸನೀಯ. ಇದೊಂದು ಉತ್ತಮ ಪ್ರಯೋಗ. ಇದರ ಬಗ್ಗೆ ಸರ್ಕಾರ ಅರಿತಕೊಂಡು ಇದನ್ನು ಮಾದರಿಯಾಗಿಟ್ಟುಕೊಳ್ಳಲಿ. ಶಿಕ್ಷಕ ವೃಂದಕ್ಕೆ ಈ ಪ್ರಯೋಗದ ಅರಿವು ಉಂಟಾಗುವ ಸಂವಾದ ವೇದಿಕೆಯೊಂದು ಏರ್ಪಡಲಿ. ಸಾಮಾನ್ಯ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಲಾದೀತೆ ಎಂಬ ಶಿಕ್ಷಕರ ಅನುಮಾನವನ್ನು ಹೋಗಲಾಡಿಸುವಲ್ಲಿ ಇದು ಸಹಕಾರಿ. ವಿವೇಕಶಿಕ್ಷಣ ಮಕ್ಕಳಿಗೆ ಜೀವನದ ಸಕಾರಾತ್ಮಕ ಮೌಲ್ಯಗಳನ್ನು ಕೊಟ್ಟಿದೆ. ಇದರಿಂದ ಸುತ್ತಲ ಪರಿಸರದ ಮತ್ತು ಒಟ್ಟಾರೆ ಸಮಾಜದ ಪರಿವರ್ತನೆ ಸಾಧ್ಯ'' ಎಂದು ಮೈಸೂರಿನ ಖ್ಯಾತ ಕೈಗಾರಿಕೋದ್ಯಮಿಗಳಾದ ಶ್ರೀ ಆರ್.ಗುರು ಅವರು ನುಡಿದರು. ಅವರು ೨೬.೦೧.೨೦೦೨ ರಂದು ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಬಡ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿರುವ ಉಚಿತ ಶಿಕ್ಷಣ ಯೋಜನೆಯಾದ ವಿವೇಕಶಿಕ್ಷಣದ ಪ್ರಥಮ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡುತ್ತಿದ್ದರು. ಆಶ್ರಮದ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಆಶ್ರಮದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸುರೇಶಾನಂದಜೀಯವರು ಸಾಧಾರಣ ವಿದ್ಯಾರ್ಥಿಗಳಿಗೆ ಸರಿಯಾದ ಪ್ರೋತ್ಸಾಹ ಸಿಕ್ಕರೆ ಅವರು ಏನನ್ನಾದರೂ ಸಾಧಿಸಬಲ್ಲರು ಎಂಬ ಅಂಶವನ್ನು ಸತ್ಯಘಟನೆಯೊಂದರ ಉದಾಹರಣೆಯ ಮೂಲಕ ತಿಳಿಸಿಕೊಟ್ಟರು. ಈ ಯೋಜನೆಯ ಸದುಪಯೋಗ ಪಡೆದುಕೊಂಡು, ಆತ್ಮವಿಶ್ವಾಸ ಮತ್ತು ಪರಿಶ್ರಮಗಳ ಮೂಲಕ ಜ್ಞಾನ ಸಂಪಾದನೆಯ ಕುತೂಹಲ ವನ್ನು ಬೆಳೆಸಿಕೊಳ್ಳಿ ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ನಂತರ ಮಕ್ಕಳು ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಸಭಿಕರ ಮನರಂಜಿಸಿದರು



ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ಖ್ಯಾತ ಕೈಗಾರಿಕೋದ್ಯಮಿಗಳಾದ ಶ್ರೀಯುತ ಆರ್. ಗುರು ಹಾಗೂ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಮತ್ತು ಸ್ವಾಮಿ ಸುರೇಶಾನಂದಜಿಯವರು.

## ರಾಂಚಿಯಲ್ಲಿ ಯುವ ಸಮ್ಮೇಳನ ಹಾಗೂ ರಾಷ್ಟ್ರೀಯ ಏಕತಾ ಶಿಬಿರ

ಜಾರ್ಖಂಡ ರಾಜ್ಯದ ರಾಜಧಾನಿ ರಾಂಚಿಯಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮವು ೨೦೦೨, ಜನವರಿ ೧೨ ರಿಂದ ೭ ದಿನಗಳ ಯುವ ಸಮ್ಮೇಳನ ಹಾಗೂ ರಾಷ್ಟ್ರೀಯ ಏಕತಾ ಶಿಬಿರವನ್ನು ಆಯೋಜಿಸಿತ್ತು. ರಾಷ್ಟ್ರೀಯ ಯುವದಿನವಾಗಿ ಆಚರಿಸಲ್ಪಡುವ ಸ್ವಾಮಿ ವಿವೇಕಾನಂದರ ಜನ್ಮದಿನಾಂಕ ೧೨ನೇ ಜನವರಿಯಂದು ರಾಜ್ಯಪಾಲರಾದ ಶ್ರೀಯುತ ಪ್ರಭಾತಕುಮಾರ್‌ರವರು ರಾಂಚಿ ನಗರದಲ್ಲಿರುವ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಮಾಲಾರ್ಪಣೆಯ ಮೂಲಕ ಗೌರವಿಸಿ ಸಾಂಕೇತಿಕವಾಗಿ ಯುವ ಸಮ್ಮೇಳನ ಹಾಗೂ ರಾಷ್ಟ್ರೀಯ ಏಕಾತಾ ಶಿಬಿರವನ್ನು ಉದ್ಘಾಟಿಸಿದರು. ಶಿಬಿರದಲ್ಲಿ ಸುಮಾರು ೩೫೦ ಯುವಕರು ಭಾಗವಹಿಸಿದ್ದರು.

ಆಶ್ರಮದ ಸಭಾಂಗಣದಲ್ಲಿ ನಡೆದ ಶಿಬಿರವು "ರಾಷ್ಟ್ರೀಯ ಏಕತೆಯ ಆಧಾರ" "ವಿವಿಧತೆಯಲ್ಲಿ ಏಕತೆ" "ಮಾನವೀಯ ಮೌಲ್ಯಗಳ ಅವಶ್ಯಕತೆ" "ಮಾನವೀಯ ಮೌಲ್ಯಗಳ ಬಗ್ಗೆ ಭಾರತೀಯ ಚಿಂತನೆ" "ಆದರ್ಶ ಜೀವನ ಮತ್ತು ಆಧುನಿಕ ಜೀವನ", "ಸ್ವಾಮಿ ವಿವೇಕಾನಂದ ಹಾಗೂ ಮಾನವೀಯ ಮೌಲ್ಯಗಳು" ಎಂಬೀ ವಿಷಯಗಳನ್ನು ಸುದೀರ್ಘವಾಗಿ ಚರ್ಚಿಸಿತು. ಈ ಕಾರ್ಯಕ್ರಮಗಳನ್ನು ಪೂಜ್ಯ ಸ್ವಾಮಿ ಚಿನ್ಮಯಾನಂದಜಿ, ಅಧ್ಯಕ್ಷರು, ರಾಮಕೃಷ್ಣ ಆಶ್ರಮ, ಆಲ್ಮೋರಾ, ಪೂಜ್ಯ ಸ್ವಾಮಿ ಶಶಾಂಕಾನಂದಜಿ, ಕಾರ್ಯದರ್ಶಿ, ರಾಮಕೃಷ್ಣ ಮಿಷನ್, ರಾಂಚಿ ಹಾಗೂ ಇತರ ಗಣ್ಯರು ನಡೆಸಿಕೊಟ್ಟರು.

ಸ್ವಾಮಿ ವಿವೇಕಾನಂದರ ಸಂದೇಶಾನುಸಾರ ರಾಂಚಿ ಆಶ್ರಮವು ನಡೆಸುತ್ತಿರುವ ದಿವ್ಯಾಯನ ಕೃಷಿ ವಿಜ್ಞಾನಕೇಂದ್ರದ ಸೇವಾಕಾರ್ಯವನ್ನು ಶಿಬಿರಾರ್ಥಿಗಳಿಗೆ ಪರಿಚಯಿಸಿ, ಅವರು ತಮ್ಮ ಜೀವನದಲ್ಲಿ ಸೇವಾ ಭಾವವನ್ನು ಅಭ್ಯಸಿಸುವಂತೆ ಕರೆ ನೀಡಲಾಯಿತು.

ಶಿಬಿರದಲ್ಲಿ ಪ್ರಾತಃಕಾಲ ೫.೩೦ ರಿಂದ ರಾತ್ರಿ ೧೦ ಘಂಟೆಯ ವರೆಗಿನ ಭಜನೆ, ಮಂತ್ರಪಠನೆ, ಧ್ಯಾನ, ಯೋಗಾಭ್ಯಾಸ, ಶಿಬಿರ ವಿಷಯ ಚಿಂತನೆ, ವಚನವೇದ ವಾಚನ ಇತ್ಯಾದಿ ಬಿಗಿ ಕಾರ್ಯಕ್ರಮ ಸೂಚಿಯೇ ಯುವ ಶಿಬಿರಾರ್ಥಿಗಳಿಗೆ ಶಿಸ್ತಿನ ಹಾಗೂ ಏಕಾಗ್ರತೆಯ ಜೀವನದ ಅನುಭವವನ್ನು ನೀಡಿತು.